## ಕರ್ನಾಟಕ ಸರ್ಕಾರ

ಸಂಖ್ಯೆ: ಎಸ್‌ಟಿಡಿ 60:92-93,

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರವರ ಕಛೇರಿ,
ಬೆಂಗಳೂರು. ದಿನಾಂಕ: 24-8-1992,

### ಸುತ್ತೋಲೆ

ವಿಷಯ: ಕರ್ನಾಟಕ ನ್ಯಾಯಾಲಯಗಳ ಫೀಜು ಮತ್ತು ದಾವೆಗಳ ಮೌಲ್ಯ ನಿಗದಿ ಅಧಿನಿಯಮ 1958ರ ಮೇರೆಗೆ ಪರಿಶಿಷ್ಟಜಾತಿ ಪಂಗಡದ ಅರ್ಜಿದಾರರ ಮನವಿಗೆ ವಿನಾಯ್ತಿ ಬಗ್ಗೆ ಏಕರೂಪದ ಸುತ್ತೋಲೆ ಕೋರಿ ಮನವಿ.

ಉಲ್ಲೇಖ: (ಕರ್ನಾಟಕ) ಮೈಸೂರು ಸರ್ಕಾರದ ಪ್ರಕಟಣೆ ಸಂಖ್ಯೆ: (ಎಸ್‌ಓ 1892) ದಿನಾಂಕ: 26ನೇ ಆಗಸ್ಟ್ 1970.

2) ತುಮಕೂರು ಜಿಲ್ಲಾ ನೋಂದಣಾಧಿಕಾರಿಯವರ ಕೇಂದ್ರ ಕಾರ್ಯಸ್ಥಾನ ಸಹಾಯಕರು ಮತ್ತು ಮುದ್ರಾಂಕ ಮತ್ತು ನೋಂದಣಿ ನಿರೀಕ್ಷಕರ ಪತ್ರ ಸಂಖ್ಯೆ: ಎಸ್‌ಟಿಸಿ: 92-93, ದಿನಾಂಕ: 30-6-1992.

— — — — —

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ಉಲ್ಲೇಖ 2ರಲ್ಲಿ ಹೊರಗಳಿರುವ ಪತ್ರದಲ್ಲಿ ತುಮಕೂರು ಜಿಲ್ಲಾ ನೋಂದಣಾಧಿಕಾರಿ ಕೇಂದ್ರ ಕಾರ್ಯಸ್ಥಾನ ಸಹಾಯಕರು ಹಾಗೂ ಮುದ್ರಾಂಕ ಮತ್ತು ನೋಂದಣಿ ನಿರೀಕ್ಷಕರು, ಉಲ್ಲೇಖದಲ್ಲಿ (1)ಹೊರಗಳಿರುವ ಸರ್ಕಾರದ ಪ್ರಕಟಣೆಯಲ್ಲಿ ನೀಡಲಾಗಿರುವ ವಿನಾಯಿತಿಯನ್ನು ಅನೇಕ ಸರ್ಕಾರಿ ಕಛೇರಿಗಳಲ್ಲಿ ಜಾರಿಗೆ ಕೊಡದೆ ಪರಿಶಿಷ್ಟ ಜಾತಿ: ಪಂಗಡದ ಜನರಿಂದ ಅರ್ಜಿ ಸ್ಟ್ಯಾಂಪ್ ವಸೂಲಿ ಮಾಡುತ್ತಿರುವ ಪ್ರಕರಣಗಳು ಸಾರ್ವಜನಿಕ ಕಛೇರಿ ತಪಾಸಣೆ ಮಾಡಿದ ಕಾಲಕ್ಕೆ ಅವರ ಗಮನಕ್ಕೆ ಬಂದಿದ್ದು, ಇದರಿಂದಾಗಿ, ಈ ಜನಾಂಗದ ಜನರು ಸರ್ಕಾರದ ನೆರವಿನಿಂದ ವಂಚಿತರಾಗಿರುವುದು ಧೃಢಪಟ್ಟಿರುವುದರಿಂದ ಇದರ ನಿವಾರಣೆಗಾಗಿ, ಸ್ಟ್ಯಾಂಪ್ ಕಮೀಷನರ್ ಅವರಿಗೆ ಈ ಕಛೇರಿಯಿಂದ ಕಾನೂನು ಪಾಲಿಸಲು ಕ್ರಮವನ್ನು ಕೈಗೊಂಡು ರಾಜ್ಯ ಸರ್ಕಾರದ ಎಲ್ಲಾ ಇಲಾಖೆಯ ಅಧಿಕಾರಿಗಳಿಗೆ ಏಕರೂಪದ ಸುತ್ತೋಲೆ ಕಳಿಸುವದರಿಂದ ಸರ್ಕಾರದ ಆದೇಶದ ನೆರವು ಪರಿಶಿಷ್ಟಜಾತಿ:ಪಂಗಡದ ಜನಸಾಮಾನ್ಯರಿಗೆ ದೊರೆಯುವಂತಾಗುತ್ತದೆಂದು ತಿಳಿಸಿರುವುದರಿಂದ ಸದರಿ ಉಲ್ಲೇಖ 1ರಲ್ಲಿ ಹೊರಗಳಿರುವ ಸರ್ಕಾರದ ಅಧಿಸೂಚನೆಯ ಪ್ರತಿಯನ್ನು ರಾಜ್ಯದ ಎಲ್ಲಾ ಇಲಾಖಾಧಿಕಾರಿಗಳಿಗೂ, ಈ ಮೂಲಕ ಕಳಿಸಿಕೊಡುವುದರೊಂದಿಗೆ, ಸದರಿ ವಿನಾಯಿತಿಯನ್ನು ಚಾಚೂತಪ್ಪದೆ ನೀಡುವಂತೆ, ಅವರ ಅಧೀನಾಧಿಕಾರಿಗಳಿಗೆ ಸೂಕ್ತ ತಿಳುವಳಿಕೆ ನೀಡುವಂತೆ, ಸಹ, ಈ ಮೂಲಕ ಕೋರಲಾಗಿದೆ.

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು.

ರಾಜ್ಯದ ಎಲ್ಲಾ ಇಲಾಖಾ ಮುಖ್ಯಾಧಿಕಾರಿಗಳಿಗೆ,
ನೋಂದಣಿ ಇಲಾಖೆಯ ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳಿಗೆ,
ಈ ಕಛೇರಿಯ ಆಡಿಟ್ ವಿಭಾಗದ ಸಹಾಯಕ ನೋಂದಣಿ ಮಹಾಪರಿವೀಕ್ಷಕರು ಕೇಂದ್ರ
ಸ್ಥಾನ ಸಹಾಯಕರು, ಆಡಳಿತ ಮತ್ತು (ಆಡಿಟ್) ವಿಭಾಗ ಇವರಿಗೆ,
ಸೂಕ್ತ ಕ್ರಮಕ್ಕಾಗಿ.

P.T.O.